ಋತುವಿಗೆ. ಚಿಕ್ಕಮ್ಮನನ್ನು ವಿನಾಕಾರಣ ಆತಂಕಕ್ಕೆ ದೂಡಿದ ತನ್ನ ಬಗ್ಗೆ ಬೇಸರವಾಯಿತು.

'ಸಾರಿ ಚಿಕ್ಕಮ್ಮ, ರಾತ್ರಿ ಚಾರ್ಜ್ ಮಾಡೋದು ಮರ್ತುಬಿಟ್ಟಿದ್ದೆ, ರಮ್ಯಾಳ ಪಿಜಿಯಲ್ಲಿ ಮಾತಾಡುತ್ತಾ ಕುಳಿತು ಸಮಯ ಆಗಿದ್ದೇ ತಿಳಿಯಲಿಲ್ಲ...' ಋತು ಸಮಜಾಯಿಶಿ ನೀಡಿದಾಗ ಕಲಾವತಿ ಸುಮ್ಮನಾಗಲೇ ಬೇಕಾಯಿತು.

'ಹೇಮಂತ, ಋತುವಿನ ಕಾಲೇಜಿನಲ್ಲಿ ಇವತ್ತು ಜೋಡಿ ಕೊಲೆ ನಡೆದಿದೆ....ಯಾವ ಟಿವಿ ಚಾನಲ್ ಹಾಕಿದ್ರೂ ಇದೇ ಸುದ್ದಿ....ಕೊಲೆಗಾರ ನರಭಕ್ಷಕನಂತೆ, ಕೇವಲ ಮಾನವರಕ್ತವನ್ನು ಹೀರುವುದಕ್ಕಾಗಿ ಈ ಎಲ್ಲಾ ಕೊಲೆಗಳನ್ನು ಮಾಡ್ತಿದ್ದಾನಂತೆ, ನಂಗ್ಯಾಕೋ ತುಂಬಾ ಭಯವಾಗ್ತಿದೆಯಪ್ಪಾ.. ನೀನು ಬೇರೆ ಆ ಕೊಲೆಗಾರನನ್ನು ಪತ್ತೆ ಹಚ್ಚಲು ಹೊರಟಿದ್ದಿ....ನಿಜವಾಗ್ಲೂ ಇವೆಲ್ಲಾ ನಿಜಾನಾ?' ಆತಂಕದಿಂದ ಪ್ರಶ್ನಿಸಿದರು ಕಲಾವತಿ

'ಅಯ್ಯೋ ಆಂಟಿ, ನಾವೇ ಇನ್ನು ತನಿಖೆಯನ್ನು ಪೂರ್ತಿ ಮಾಡಿಲ್ಲ, ಅಷ್ಟರಲ್ಲಿ ಮಿಡಿಯಾದವ್ರಿಗೆ ಇಂಥಾ ಸುದ್ದಿಗಳೆಲ್ಲಾ ಸಿಗೋಕೆ ಸಾಧ್ಯನಾ, ಇಂಥಾ ಟೈಂಗಳಲ್ಲಿ ಊಹಾಪೋಹಗಳೆಲ್ಲಾ ರೆಕ್ಕೆ ಬಿಚ್ಚಿಕೊಂಡು ಕುಣಿತಾವಷ್ಟೇ, ಅವ್ರಿಗೆಲ್ಲಾ ಥ್ರಿಲ್ಲಿಂಗ್ ನ್ಯೂಸ್ ಬೇಕು, ಹೆದರಿದವ್ರ ಮೇಲೆ ಹಾವು ಎಸೆದ್ರು ಅನ್ನೋ ಹಾಗೆ ಇವೆಲ್ಲಾ ಆಂಟಿ, ನೀವು ಸುಮ್ನೆ ತಲೆ ಕೆಡಿಸಿಕೊಳ್ಬೇಡಿ..' ಎಂದ ಹೇಮಂತ ಋತು, ರಮ್ಯರತ್ತ ತಿರುಗಿದ.

'ನಿಮ್ಮನ್ನೆಲ್ಲಾ ನೋಡ್ಬೇಕೂಂತ ಅನ್ನಿಸ್ತು, ಅದಕ್ಕೆ ಬಂಗ್ಲೆಗೆ ಹೇಳ್ದೇ ಕೇಳ್ದೇ ಬಂದ್ಬಿಟ್ಟೆ...' ಎಂದ ಅವನ ಮಾತಿಗೆ ಕೀಟಲೆಯಿಂದ ನಕ್ಕಳು ರಮ್ಯ.

'ಹೇಮಂತ್, ಸುಳ್ಯಾಕೆ ಹೇಳ್ತೀರಿ, ನಮ್ಮನ್ನೆಲ್ಲಾ ಅನ್ನೋ ಬದ್ಲು ಋತುವನ್ನು ನೋಡ್ಬೇಕೂಂತ ಅನ್ನಿಸ್ತು ಅಂತ ಧೈರ್ಯವಾಗೇ ಹೇಳ್ಬಿಡಿ, ಕೊಲೆಗಾರನನ್ನು ಹಿಡಿಯುವ ಗುಂಡಿಗೆಯ ಪತ್ತೇದಾರನಿಗೆ ಈ ಭಯ ಯಾಕೋ...' ಕೆಣಕಿದಳು.

ಅವಳ ಕೀಟಲೆಯ ಮಾತಿಗೆ ಋತುವಿನ ಮುಖ ರಂಗೇರಿತು. ಅವಳಿಗರಿವಿಲ್ಲದೆ ಅವಳ ತುಟಿಗಳು ಅರೆಬಿರಿದು ನಸುನಕ್ಕವು.

ರಂಗೇರಿದ ಅವಳ ಮುಖವನ್ನೇ ನೋಡುತ್ತಾ ಕಣ್ತುಂಬಿಕೊಂಡ ಹೇಮಂತ. ಕೋಟೆ ಬಂಗಲೆಯಲ್ಲಿ ರಾಜಕುಮಾರಿಯಂತೆ ಬೆಳೆಯ ಬೇಕಿದ್ದವಳು. ಯಾವುದಕ್ಕೂ ಹೆದರದೆ ಆತ್ಮವಿಶ್ವಾಸದ ಪ್ರತೀಕವಾಗಿ ಬೆಳಗಬೇಕಿದ್ದವಳು ಈ ಋತು. ಆದರೆ ಅಂಜುಬುರುಕಿಯಾಗಿ ಎಲ್ಲದಕ್ಕೂ ಹೆದರುವಂತೆ ಬಂಗಲೆಯ ಹತ್ತಾರು ಘಟನೆಗಳು ಅವಳನ್ನು ರೂಪಿಸಿವೆ. ತಾನು ಕೊನೆಯವರೆಗೂ ಅವಳ ಜೊತೆಯಾಗಿ, ಅವಳ ಉಸಿರಾಗುವ ಕನಸನ್ನು ಕಾಣುವುದರಲ್ಲೇ ಒಂದು ಸುಖವಿದೆಯಲ್ಲ. ಅವನಿಗೆ ಈ ಕ್ಷಣವೇ ಅವಳನ್ನು ಬಾಚಿ ತಬ್ಬಿಕೊಂಡು ಮುದ್ದಿಸ ಬೇಕೆನಿಸಿತು. ಕಷ್ಟಪಟ್ಟು ತನ್ನನ್ನು ನಿಯಂತ್ರಿಸಿಕೊಂಡ.

ಋತು ಈಗ ತಲೆಯೆತ್ತಿ ಹೇಮಂತನನ್ನೇ ನೋಡಿದಳು. ಹಣೆಯಲ್ಲಿದ್ದ ಬ್ಯಾಂಡೇಜನ್ನು ಮತ್ತೊಮ್ಮೆ ಗಮನಿಸಿದಳು. ಏನಾಯಿತು?....ಯಾವುದಾದರೂ ಅಪಾಯಕ್ಕೆ ಸಿಲುಕಿದನೇ ಹೇಮಂತ....ಅವಳು ಚಡಪಡಿಸಿದಳು.

ಋತುವಿನ ಚಡಪಡಿಕೆಯನ್ನು ಕಡೆಗಣ್ಣಿನಿಂದ ಗಮನಿಸಿದಳು ರಮ್ಯ. ಆ ಜೋಡಿಗಳಿಗೆ ಈಗ ಏಕಾಂತವನ್ನು ಒದಗಿಸಿಕೊಡುವುದು ಸೂಕ್ತವೆನಿಸಿತು.

'ಆಂಟಿ ಬಂಗಲೆಯ ಭಾವೀ ಅಳಿಯ ಬಂದಿದ್ದಾರೆ, ಅವರನ್ನು ಉಪಚರಿಸೋದು ಬೇಡ್ವಾ, ಬನ್ನಿ ನಾವಿಬ್ರೂ ಏನಾದ್ರೂ ತಿಂಡಿ ಮಾಡಿಕೊಂಡು ಬರೋಣ, ಬರೀ ಕಾಫಿಯೋ ಟೀಯೋ ಕೊಟ್ರೆ ಏನು ಚೆನ್ನಾಗಿರುತ್ತೆ ಹೇಳಿ..?'

ರಮ್ಯಾಳೆಂದಾಗ ಕಲಾವತಿಗೆ ತಪ್ಪಿಸಿಕೊಳ್ಳಲು ಬೇರೆ ದಾರಿಯೇ ಇರಲಿಲ್ಲ. ಅಡುಗೆ ಮನೆಯತ್ತ ಹೊರಟರು ಕಲಾವತಿ. ಸ್ವಲ್ಪ ಹಿಂದುಳಿದ ರಮ್ಯ ಋತು ಹೇಮಂತರ ಬಳಿ ಬಂದು 'ಅರ್ಧ ಗಂಟೆ ಟೈಂ ಕೊಟ್ಟಿದ್ದೀನಿ ನಿಮಗೋಸ್ಕರ, ಸ್ವಲ್ಪ ಹೊತ್ತು ಏಕಾಂತವಾಗಿರಿ....' ಎಂದು ಮೆಲುಧ್ವನಿಯಲ್ಲಿ ಹೇಳಿ ಸರಿದು ಹೋದಾಗ ಹೇಮಂತ ನಸುನಕ್ಕ.

'ಋತು, ನಿನ್ನ ಫ್ರೆಂಡ್ ರಮ್ಯ ತುಂಬಾ ಜಾಣೆಯಾಗಿದ್ದಾಳೆ, ಹೇಗೆ ನಮ್ಮಿಬ್ರಿಗೆ ಏಕಾಂತವನ್ನು ಮಾಡಿಕೊಟ್ಟು ನೋಡು..' ಎಂದ.

ಗೆಳತಿಯ ಸಮಯ ಸ್ಫೂರ್ತಿಯನ್ನು ನೋಡಿ ಋತುವಿಗೂ ಸಂತೋಷವಾಯಿತು.

ಹೊರಗೆಲ್ಲೋ ಇದ್ದ ಭರತ ದಢದಢನೆ ಒಳಬಂದು ಹಾಲಿನಲ್ಲೇ ಒಂದು ಮೂಲೆಗಿರುವ ಅಕ್ವೇರಿಯಂನ ಮುಂದೆ ಕುಳಿತು ಬಣ್ಣದ ಮೀನುಗಳನ್ನು ನೋಡತೊಡಗಿದ.

ಬರ್ಮುಡಾದ ಮೇಲೆ ದೊಗಲೆ ಟೀ ಶರ್ಟ್ ಒಂದನ್ನು ಹಾಕಿಕೊಂಡಿದ್ದ ಭರತ. ಈ ದಿನ ಚಳಿಯ ವಾತಾವರಣವಿದ್ದುದರಿಂದ ಬೆಚ್ಚಗೆ ಉಲ್ಲನ್ ಕ್ಯಾಪನ್ನು ಧರಿಸಿದ್ದ.

'ಹೇಮಂತ್, ಅಕ್ವೇರಿಯಂನ ಬಣ್ಣದ ಮೀನುಗಳಿಗೂ, ಈ ಭರತನಿಗೂ ಅಂತಹಾ ವ್ಯತ್ಯಾಸವೇನೂ ಇಲ್ಲ, ಅವು ನೀರಿನಲ್ಲಿ ಈಜಾಡಿದ್ರೆ ಇವ್ನು ಬಂಗಲೆಯಲ್ಲಿ ತಿರುಗ್ತಾನೆ ಅಷ್ಟೇ...' ನೊಂದು ಮಾತನಾಡಿದಳು ಋತು. ತನ್ನನ್ನು ಕೀಟಲೆ ಮಾಡುತ್ತಾ ಬಂಗಲೆಯಲ್ಲಿ ಪಾದರಸದಂತೆ ಚುರುಕಾಗಿ ಓಡಾಡುತ್ತಿದ್ದ ಆ ಹಿಂದಿನ ಭರತನ ನೆನಪಾಗಿ ಕಂಗಳು ತೇವಗೊಂಡವು.

'ಚಿಯರ್ ಅಪ್ ಋತು, ಬೇಜಾರು ಮಾಡ್ಕೋಬೇಡ, ಎಲ್ಲಾ ಸರಿಯಾಗುತ್ತೆ, ಕೋಟೆ ಬಂಗಲೆಯ ರಾಜಕುಮಾರ ಒಂದು ದಿನ ಮೌನ ಮುರಿದು ಮಾತಾಡ್ತಾನೆ ನೋಡ್ತಿರು..'

ಅವನ ಭರವಸೆಯ ಮಾತಿನಿಂದ ಸ್ವಲ್ಪ ಸಮಾಧಾನಗೊಂಡಳು ಋತು. ತಮ್ಮನ ಭುಜವನ್ನೊಮ್ಮೆ ವಾತ್ಸಲ್ಯದಿಂದ ಅದುಮಿದಳು.

'ರಮ್ಯಾಳೇನೋ ಅರ್ಧ ಗಂಟೆ ಟೈಂ ಕೊಟ್ಟಿದ್ದಾಳೆ, ಆದ್ರೆ ಎಲ್ಲಿಗೆ ಹೋಗೋಣ ಋತು?' ಹೇಮಂತನೆಂದಾಗ ತಮ್ಮ ಏಕಾಂತಕ್ಕೆ ಟೆರೇಸಿನ ಲತಾ ಮಂಟಪವೇ ಸೂಕ್ತವೆನಿಸಿತು ಅವಳಿಗೆ. ಅದನ್ನೇ ಅವನಿಗೆ ಹೇಳಿದಳು. ಅವನೂ ಸಮ್ಮತಿಸಿದ. ಪುರುಷೋತ್ತಮರಿನ್ನೂ ಬಂಗಲೆಗೆ ಹಿಂದಿರುಗಿರಲಿಲ್ಲ.

ಇಬ್ಬರೂ ಮೆಲುವಾಗಿ ಮಾತನಾಡುತ್ತಾ ಟೆರೇಸ್ ತಲುಪಿದರು. ಶುಕ್ಲ ಪಕ್ಷದ ದಿನಗಳಾದ್ದರಿಂದ ಮೇಲೆ ನಸು ಬೆಳಕಿತ್ತು. ಆಗಷ್ಟೇ ತಮ್ಮ ತಮ್ಮ ಗೂಡುಗಳಿಗೆ ಹಕ್ಕಿಗಳು ಹಿಂದಿರುಗಿದ್ದರಿಂದ ಅವುಗಳ ಚಿಲಿಪಿಲಿ ಬಂಗಲೆಯ ದಟ್ಟವಾದ ಮರಗಳಿಂದ ಕೇಳಿ ಬರತೊಡಗಿತ್ತು. ಆಕಾಶದಲ್ಲಿ ಮಿಣುಕು ನಕ್ಷತ್ರಗಳು ಕಣ್ತೆರೆಯುತ್ತಿದ್ದರೆ ಬೀಸುಗಾಳಿಗೆ ಕುಂಡಗಳಲ್ಲಿ ಬೆಳೆಸಿದ್ದ ಹೂ ಗಿಡಗಳು ತಲೆದೂಗುತ್ತಿದ್ದವು.

ಚಳಿಗಾಳಿ ಹಿತವಾಗಿ ಕೆರೆಯ ಕಡೆಯಿಂದ ಬೀಸತೊಡಗಿದಾಗ ತನಗರಿವಿಲ್ಲದಂತೆ ಋತು ಹೇಮಂತನ ಭುಜವನ್ನು ಬಳಸಿದಳು. ಸುತ್ತಲಿನ ಸೊಬಗನ್ನು ಸವಿಯುತ್ತಲೇ ಋತು–ಹೇಮಂತರು ಲತಾಮಂಟಪದ ಕಲ್ಲು ಬೆಂಚಿನಲ್ಲಿ ಹೋಗಿ ಕುಳಿತರು.

'ಹೇಮಂತ್, ನಿನ್ನ ಹಣೆಗೆ ಏನಾಯ್ತು, ಅದನ್ನು ಮೊದಲು ಹೇಳು.' ಆತಂಕದಿಂದ ಕೇಳಿದಳು ಋತು.

'ಓ....ಇಷ್ಟಕ್ಕೇ ಹೆದರಿದ್ಯಾ, ನಿನ್ನೆ ನಿಮ್ಮ ಬಂಗಲೆಯಿಂದ ಹಿಂದಿರುಗುವಾಗ ಸಣ್ಣ ಆಕ್ಸಿಡೆಂಟಾಯ್ತು ಅಷ್ಟೆ..' ಪ್ರಿನ್ಸಿಪಾಲ್ ಭುವನೇಶ್ವರಿಗೆ ಹೇಳಿದ್ದ ಅದೇ ಸುಳ್ಳನ್ನು ಹೇಳಿದ ಹೇಮಂತ.

'ಏನಾದ್ರಾಗ್ಲಿ, ನಂಗ್ಯಾಕೋ ತುಂಬಾ ಭಯವಾಗ್ತಿದೆ, ಚಿಕ್ಕಮ್ಮ ಬೇರೆ ನೀನು ಬಂಗಲೆಗೆ ಅಡಿಯಿಟ್ಟ ಶಕುನ ಸರಿಯಿಲ್ಲ ಅಂತ ಒಂದೇ ಸಮನೆ ರಗಳೆ ಮಾಡ್ತಿದ್ದಾಳೆ, ನಿನ್ನನ್ನು ನಾನು ಮರೆಯಬೇಕಂತೆ, ನನ್ನನ್ನು ಇಷ್ಟು ವರ್ಷ ಸಾಕಿ ಬೆಳೆಸಿದ ಚಿಕ್ಕಮ್ಮನೇ ಈಗ ನನ್ನ ಮನಸ್ಸನ್ನು ನೋಯಿಸ್ತಿದ್ದಾಳೆ, ಕಾಲೇಜಿನಲ್ಲಿ ಬೇರೆ ಇವತ್ತು ಎರಡು ಭಯಂಕರ ಕೊಲೆಗಳು ನಡೆದಿವೆ, ನೀನೇ ಅದರ ಇನ್ವೆಸ್ಟಿಗೇಟ್ ಮಾಡ್ತಿದ್ದಿ, ನಿಂಗೇನಾದ್ರೂ ಅಪಾಯವಾದ್ರೆ....ಇಲ್ಲ ಹೇಮಂತ್, ನಂಗೆ ಸಮಾಧಾನವಾಗಿ ಇರೋಕಾಗ್ತಿಲ್ಲ...' ಎಂದ ಋತು ಜೋರಾಗಿ ಬಿಕ್ಕತೊಡಗಿದಾಗ ಅವಳನ್ನು ಸಮಾಧಾನ ಪಡಿಸುವಷ್ಟರಲ್ಲಿ ಹೇಮಂತನಿಗೆ ಸಾಕು ಸಾಕಾಯಿತು.

'ಋತು....ನೀನ್ಯಾರು ಹೇಳು?....ಈ ಬಂಗಲೆಯ ಯುವರಾಣಿ, ಜೊತೆಗೆ ಪತ್ತೇದಾರನ ಹೆಂಡ್ತಿಯಾಗೋಳು, ನೀನು ಧೈರ್ಯವಾಗಿರಬೇಕಲ್ವಾ, ಇಲ್ನೋಡು ಡಿಯರ್, ನಾನು ಮತ್ತೆ ಮತ್ತೆ ಹೇಳ್ತಿದೀನಿ, ನಮ್ಮಿಬ್ರನ್ನು ಬೇರೆ ಮಾಡೋಕೆ ಯಾರಿಂದಲೂ ಸಾಧ್ಯವಿಲ್ಲ, ನಿನ್ನ ಪ್ರೀತಿಯೇ ನನ್ನನ್ನು ಯಾವುದೇ ಅಪಾಯ ಬರದಂತೆ ಕಾಪಾಡುತ್ತೆ, ಚಿಕ್ಕಂದಿನಲ್ಲಿ ಚಿಗುರಿದ ನಮ್ಮ ಪ್ರೇಮವೇ ನಮ್ಮಿಬ್ಬರನ್ನು ಒಂದು ಮಾಡಿದೆ, ಕಲಾವತಿ ಆಂಟಿಯ ಮಾತುಗಳಿಗೆ ನೀನು ತಲೆಕೆಡಿಸಿಕೊಳ್ಬೇಡ, ಇನ್ಮೇಲೆ ಯಾರನ್ನೂ ನಂಬಬೇಡ, ನಮ್ಮಿಬ್ರನ್ನು ಬೇರೆ ಮಾಡೋಕೆ ನಿಮ್ಮ ಚಿಕ್ಕಮ್ಮನೇ ಈ ಎಲ್ಲಾ ನಾಟಕಗಳನ್ನು ಮಾಡ್ತಿದ್ದಾರೆ ಅಂತ ನಂಗೆ ಬಲವಾಗಿ ಅನ್ನಿಸೋಕೆ ಶುರುವಾಗಿದೆ, ಅದಕ್ಕೇ ಹೇಳ್ತಿದೀನಿ....'

(ಸಶೇಷ)